

ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ

### ಸ್ವಪ್ನ ಸಾಕಾರದ ಅಮೃತಕ್ಷಣ

ಈ ಹಾಸ್ಟೆಲ್ ನಿರ್ಮಾಣದತ್ತ ಹೆಚ್ಚು ಗಮನಕೊಡಲು ಸೋನಾಲ್ ಮೂರು ತಿಂಗಳು ಮಹಾಬಲೇಶ್ವರದಲ್ಲಿಯೇ ವಾಸಿಸಲು ನಿರ್ಣಯಿಸಿದರು. ಅವರ ವಾಸ ಆರಾಮದ್ದಿರಲಿ ಎಂದು ಭಾವೇಶ್ ಮತ್ತು ನೀತಾ ತಾವಿದ್ದ ಕೋಣೆಯನ್ನು ಖಾಲಿ ಮಾಡಿ ಸೋನಾಲ್ ಅವರಿಗೆ ನೀಡಿದರು. ಮೊದಲೇ ಸನ್‌ರೈಸ್‌ನ ನಾಲ್ಕೂ ಕಡೆ ಪರ್ವತಗಳು ಮತ್ತು ಅರಣ್ಯವಿತ್ತು. ಇದೀಗ ಕಟ್ಟಡಕ್ಕೆ ನೆಲ ಅಗೆದು, ನಾಲ್ಕೂ ಕಡೆಯೂ ಮಣ್ಣು ಗುಡ್ಡೆಯಾಗಿತ್ತು. ಆ ದಿನಗಳಲ್ಲಿ ಏಕಾಏಕಿ ಜೀವಜಂತುಗಳ ಉಪದ್ರವ ಹೆಚ್ಚಿತು. ಪ್ರತಿ ದಿನ ಒಬ್ಬರಲ್ಲ ಒಬ್ಬರಿಗೆ ಏನಾದರೂ ಕಚ್ಚಿ ಹೋಗುತ್ತಿತ್ತು. ತಕ್ಷಣ ಡಾಕ್ಟರ್ ಬಳಿಗೆ ಓಡಬೇಕಾಗುತ್ತಿತ್ತು. ಇದು ದೈನಂದಿನ ಉಪದ್ರವವಾಗಿತ್ತು. ಆಗ ಅವರ ಓರ್ವ ಪಶುವೈದ್ಯ ಮಿತ್ರರು ಇವೆಲ್ಲಕ್ಕೂ ಅತ್ಯಂತ ಸರಳ ಪರಿಹಾರವನ್ನು ನೀಡಿದರು. ಅವರು ಆರು ಬೆಕ್ಕುಗಳನ್ನು ಮತ್ತು ಎರಡು ಜರ್ಮನ್ ಶೆಫರ್ಡ್ ನಾಯಿಗಳನ್ನು ತಂದು ಇವರ ಬಳಿ ಬಿಟ್ಟು ಹೋದರು. ಮೊದಲು ಕೂಡಾ ಅವರು ಭಾವೇಶ್ ಅವರಿಗೆ ಒಂದು ಲೆಬ್ರಡೋರ್ ನಾಯಿಯನ್ನು ಉಡುಗೊರೆಯಾಗಿ ಕೊಟ್ಟಿದ್ದರು. ಆ ನಾಯಿ ಭಾವೇಶ್ ಅವರಿಗೆ ನಿಯತ್ತಿನ ಸಂಗಾತಿಯಾಗಿತ್ತು. ಈ ಮೂಕಪ್ರಾಣಿಗಳು ಬಂದ ಮೇಲೆ, ಚಮತ್ಕಾರವೇ ಆಯಿತೆನ್ನಬೇಕು. ಕಾರಣ ಮತ್ತೆಂದೂ ಅವರ ಅಂಧಮಿತ್ರರಿಗೆ ಯಾವುದೇ ಹುಳು ಹುಪ್ಪಟೆ ಕಚ್ಚಿದ್ದಿಲ್ಲ.

ಸೋನಾಲ್ ಅವರ ಉಪಸ್ಥಿತಿಯ ಕಾರಣವಾಗಿ ಹಾಸ್ಟೆಲ್‌ನ ಕೆಲಸ ಬಹಳ ವೇಗವಾಗಿ ಮುಂದುವರೆಯಿತು. ಆದರೆ ನಡು ನಡುವೆ ಹಣದ ಮುಗ್ಗಟ್ಟು ಎದುರಾಗುತ್ತಿತ್ತು. ಮನಸ್ಸು ಉದಾಸವಾಗುತ್ತಿತ್ತು. ನಮ್ಮ ಕನಸು ಎಂದಿಗಾದರೂ ಪೂರ್ಣ ನನಸಾಗುವುದೆ ಎಂಬ ಪ್ರಶ್ನೆ ಎದ್ದು ನಿಲ್ಲುವುದು. ನಿದ್ರೆಯಿಲ್ಲದ ರಾತ್ರಿ ಕಳೆದು ಮುಂಜಾನೆ ಎದ್ದು ಕುಳಿತಾಗ, ಪರ್ವತಗಳ ಮೇಲಿಂದ ಕಾಣುವ ಸೂರ್ಯೋದಯವನ್ನು ನೀತಾ ವರ್ಣಿಸಿ ಹೇಳುವರು. ಪ್ರತಿದಿನ ಕತ್ತಲಲ್ಲಿ ಮುಳುಗಿದ ಸೂರ್ಯ ತಪ್ಪದೆ ಬೆಳಗ್ಗೆ ಸಂಭ್ರಮದಿಂದ ಮೇಲೆದ್ದು ಬರುತ್ತಿದ್ದ. ಆ ಸುಂದರ ದೃಶ್ಯವನ್ನು ನೀತಾ ಕಣ್ಣಿಗೆ ಕಟ್ಟಿದಂತೆ ಭಾವೇಶ್ ಅವರಿಗೆ ವಿವರಿಸುವಾಗ, ಹತಾಶವಾದ ಮನಸ್ಸು ಎದ್ದು ಕೂಡುವುದು. ಕಷ್ಟಗಳನ್ನು ಯೋಚಿಸಿ ಖಿನ್ನತೆಯ ಅಂಧಕಾರದಲ್ಲಿ ಹೆಚ್ಚು ಹೊತ್ತು ಭಾವೇಶ್ ಕುಳಿತವರಲ್ಲ. ತಮ್ಮೊಳಗೇ ಸದಾ ಸ್ಫೂರ್ತಿಯ ಸೆಲೆಯನ್ನು ಕಂಡುಕೊಂಡವರು. ತಮ್ಮನ್ನು ತಾವು ಹುರಿದುಂಬಿಸಿಕೊಂಡವರು.

ಹೋಕರ್ ಮಾಯೂಸ್ ನ ಕಭೀ ಢಲ್ ಜಾನಾ
ಶಾಮ್ ಕೀ ಅಂಧೇರೆ ಕೀ ತರಹ್
ಜೀವನ್ ಏಕ್ ಸುಬಹ್ ಹೈ
ರೋಜ್ ಉಗತೆ ರಹೋ ಭೋರ್ ಕೆ ಸೂರಜ್ ಕೀ ತರಹ್

(ಸಂಜೆಯ ಅಂಧಕಾರದ ಹಾಗೆ
ಹತಾಶನಾಗಿ ಅಸ್ತಮಿಸಬೇಡ
ಜೀವನ ಒಂದು ಮುಂಜಾನೆ
ದಿನವೂ ದಿನಮಣಿಯಂತೆ ಉದಯಿಸುತ್ತಿರು)

ಮನಸ್ಸಿಗೆ ಹತಾಶೆಯ ಭಾವ ಮೂಡಿದಾಗಲೆಲ್ಲ, ಈ ನಾಲ್ಕು ಸಾಲಿನ ಮಂತ್ರವನ್ನು ಹೇಳಿಕೊಳ್ಳುವರು. ಮತ್ತೆ ಜಿಗಿದು ಬರುವರು, ಹೊಸ ಉತ್ಸಾಹದಿಂದ ಮುಂದೆ ಹೆಜ್ಜೆ ಇಡುವರು.

ಇದೀಗ ಭಾವೇಶ್ ಅವರಿಗೆ ಈ ಹಾಸ್ಟೆಲ್ ನಿರ್ಮಾಣ ತಮ್ಮ ಜೀವನದ ಎಲ್ಲಕ್ಕಿಂತ ದೊಡ್ಡ ಗೀಳಾಗಿ ಬಿಟ್ಟಿತ್ತು. ಒಂದು ದಿನ ಯಾವುದೋ ಹುಮ್ಮಸ್ಸಿನಲ್ಲಿ ತಮ್ಮ ಅಂಧ ಮಿತ್ರರಿಗೆ ಹಾಸ್ಟೆಲ್ ಸಿದ್ಧವಾಗುವವರೆಗೆ ತಾನು ಕೂದಲು ಕತ್ತರಿಸುವುದಿಲ್ಲ ಎಂದು ಭೀಷ್ಮ ಪ್ರತಿಜ್ಞೆ ಮಾಡಿಬಿಟ್ಟರು. ಕಟ್ಟಡದ ಕೆಲಸವೋ ಮೆಲ್ಲನೆ ತೆವಳಿಕೊಂಡು ಸಾಗುತ್ತಿತ್ತು. ಅಡೆತಡೆಗಳು ಪದೇ ಪದೇ ಎದುರಾಗುವವು. ಭಾವೇಶ್ ಅವರ ಕೂದಲು ಮಾತ್ರ ನಿರಾತಂಕವಾಗಿ ಭುಜದವರೆಗೆ ಬೆಳೆದು ನಿಂತಿತ್ತು, ಹಿಪ್ಪಿಯಂತೆ ಕಾಣತೊಡಗಿದ್ದರು. ಅದನ್ನು ಹಿಡಿದು ಕುದುರೆ ಬಾಲದಂತೆ ಕಟ್ಟಬೇಕಾಯಿತು. ಸುಮ್ಮನಿರದೆ, ತಾವೇ ಮೈಮೇಲೆ ಎಳೆದುಕೊಂಡ ಕಷ್ಟವನ್ನು ನಿರ್ವಹಿಸಬೇಕಿತ್ತು. ಬೇರೆಯವರಿಗೆ ಇವರ ಕೂದಲಿಂದ ಯಾವ ಕಷ್ಟವೂ ಇರಲಿಲ್ಲ, ಆದರೆ ನೀತಾಗೆ ಬಹಳ ಕೋಪ ಬಂದಿತ್ತು. ಆಕೆಯ ಎಲ್ಲ ಹೇರ್ ಬ್ಯಾಂಡ್‌ಗಳು ಕಾಣೆಯಾಗಿದ್ದವು. ಆಕೆಯ ಹೇರ್ ಬ್ಯಾಂಡ್ ಕೈಗೆ ಸಿಕ್ಕರೆ ಸಾಕು, ಭಾವೇಶ್ ಅದನ್ನು ಎತ್ತಿಕೊಂಡು ತಮ್ಮ ಕೂದಲಿಗೆ ಹಾಕಿಕೊಂಡು